# 18. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹೆನೆಗೆರೆ. ಸಾಗರ ತಾ ಶಿವಮೊಗ್ಗ ಜಿ.






1. **ಶಾಲೆಯ ಹಿನ್ನೆಲೆ:–** ಸಹ್ಯಾದ್ರಿ ತಪ್ಪಲಿನಲ್ಲಿರುವ ಶಿವಮೊಗ್ಗ ಜಿಲ್ಲೆ ತೆಂಗು ಕಂಗುಗಳಿಂದ ಸಮೃದ್ದವಾಗಿರುವ ಸಾಗರ ತಾಲ್ಲೂಕಿನ ದಟ್ಟ ಕಾನನದ ಮದ್ಯೆ ಪುಟ್ಟ ಊರು ಹೆನಗೆರೆ. ಇಲ್ಲಿ ಒಂದು ಚಿಕ್ಕ ಕಿರಿಯ ಪ್ರಾಥಮಿಕ ಶಾಲೆ ಇದೆ. ಇದು 1963ರಲ್ಲಿ ಪ್ರಾರಂಭವಾಯಿತು. **ಶ್ರೀ ಎಂ.ಬಿ. ಹಾಲಯ್ಯ** 1995ರಲ್ಲಿ ಆ ಶಾಲೆಗೆ ಪ್ರಥಮವಾಗಿ ಕರ್ತವ್ಯಕ್ಕೆ ಹಾಜರಾದಾಗ ಶಾಲೆಯ ಸ್ಥಿತಿ ತುಂಭಾ ಶೋಚನೀಯವಾಗಿತ್ತು. ಮಕ್ಕಳ ಸಂಖ್ಯೆ ಗಣನೀಯವಾಗಿ ಕಡಿಮೆ ಇತ್ತು. ಶಾಲೆಗೆ ಮೂಲಭೂತ ಸೌಕರ್ಯಗಳು ಯಾವುದೂ ಇರಲಿಲ್ಲ. ಶಾಲಾ ಆವರಣವಿಲ್ಲದೆ ಕಟ್ಟಡದ ಸುತ್ತಲು ಕಾಡು ಮರಗಳು ಬೆಳೆದು ನಿಂತಿದ್ದವು. ಮಕ್ಕಳ ಆಟೋಟಕ್ಕೆ ಆಟದ ಮೈದಾನವಾಗಲೀ, ಕೈತೋಟವಾಗಲೀ ಯಾವುದೂ ಇರಲಿಲ್ಲ. ಎರಡು ಕೊಠಡಿಗಳಿದ್ದು ಒಂದು ಕೊಠಡಿ ತುಂಬಾ ಶಿಥಿಲಾವಸ್ಥೆಯಲ್ಲಿತ್ತು. ಶಾಲಾ ಕಟ್ಟಡವಿದ್ದರೂ ಶಾಲೆಗೆ ಜಾಗ ಮಂಜೂರಾಗಿರಲಿಲ್ಲ. ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ ಹೀಗೆ ಯಾವ ಸೌಲಭ್ಯಗಳೂ ಇರಲಿಲ್ಲ. ಬಹಳ ಮುಖ್ಯವಾಗಿ ಪೋಷಕರು ಮತ್ತು ಊರಿನ ನಾಗರೀಕರಲ್ಲಿ ಶೈಕ್ಷಣಿಕ ಮನೋಭಾವವಿಲ್ಲದೇ ಶಾಲೆಯಿಂದ ದೂರ ಇದ್ದರು. ಮಕ್ಕಳು ಸಹ ಶಾಲೆಗೆ ನಿಯಮಿತವಾಗಿ ಹಾಜರಾಗುತ್ತಿರಲಿಲ್ಲ. ಸಾಗರಕ್ಕೆ ಹತ್ತಿರದಲ್ಲಿದ್ದರೂ ಸಹಾ ಹೆಚ್ಚಿನ ವಿದ್ಯಾಭ್ಯಾಸ ಪಡೆದವರ ಸಂಖ್ಯೆ ಬಹಳಷ್ಟು ಕಡಿಮೆ ಇತ್ತು. ಇದನ್ನೆಲ್ಲಾ ಗಮನಿಸಿದ ನಾವು ಒಟ್ಟಾರೆ ಬದಲಾವಣೆ ಮಾಡಬೇಕೆಂದು ಊರಿನ ಕೆಲವು ಪ್ರಮುಖರ ಜೊತೆ ಕಂಕಣಬದ್ದರಾಗಿ ನಿಂತುಕೊಂಡೆವು.

2. **ಶಾಲೆಯು ಕೈಗೊಂಡ ನಾವಿನ್ಯಯುತ ಚಟುವಟಿಕೆಗಳು**
    1) ಶಾಲಾ ಆವರಣದಲ್ಲಿ ಗ್ರಾಮಸ್ಥರಿಂದ 'ಶ್ರಮದಾನ'ದ ಮೂಲಕ ಬಾವಿ ನಿರ್ಮಾಣ ಮಾಡಿದೆವು.
    2) ಶಾಲಾ ಮೈದಾನ ಸಮತಟ್ಟು ಕಾರ್ಯಕ್ರಮ
    3) ಶಾಲೆಗೆ ನೂತನ ಕಟ್ಟಡ ನಿರ್ಮಾಣ
    4) ಸುಂದರವಾದ ಶಾಲಾ ಕೈತೋಟ ನಿರ್ಮಾಣ
    5) ಶಾಲಾ ಮುಂಭಾಗದಲ್ಲಿ ಗೇಟ್ ಮತ್ತು ಮುಖಮಂಟಪ ನಿರ್ಮಾಣ
    6) 'ಬಾಲ ಯೋಜನೆ' (ಜೋಕಾಲಿ, ಏಣಿ, ಸೀಸಾ, ಇತ್ಯಾದಿಗಳು)
    7) 'ಕಲ್ಪವೃಕ್ಷೋತ್ಸವ'
    8) ಆಕರ್ಷಕ ಧ್ವಜಸ್ಥಂಭ, ಕುಟೀರ, ಕುಳಿತುಕೊಳ್ಳಲು ಮಕ್ಕಳಿಗೆ ಮರದ ಆಸನ.

**3. ಆರಂಭದಲ್ಲಿ ತಾವುಗಳು ಎದುರಿಸಿದ ಸಮಸ್ಯೆಗಳು / ಸವಾಲುಗಳು.**

1) ನಾವೆಲ್ಲ ಕೈಗೊಂಡ ಕಾರ್ಯಗಳಿಗೆ ಆರ್ಥಿಕ ಸಮಸ್ಯೆ ಇತ್ತು.

2) ಸ್ವಇಚ್ಛೆಯಿಂದ ಶ್ರಮದಾನಕ್ಕೆ ಬರುವ ನಾಗರೀಕರ ಸಂಖ್ಯೆ ತುಂಬಾ ಕಡಿಮೆ ಇತ್ತು.

3) ಶಾಲಾ ಚಟುಚಟಿಕೆಗಳ ಬಗ್ಗೆ ಪೋಷಕರಿಗೆ ಒಂದು ಒಳ್ಳೆಯ ಮನಸ್ಥಿತಿ ಇರಲಿಲ್ಲ

4) ಮಕ್ಕಳಿಗೆ ಶಿಕ್ಷಣ ಕೊಡಿಸುವಲ್ಲಿ ನಿರಾಸಕ್ತಿ ಇತ್ತು.


5) ಗ್ರಾಮಸ್ಥರನ್ನು ಶಾಲಾ ಚಟುವಟಿಕೆಗಳಿಗೆ ಒಗ್ಗೂಡಿಸುವುದು ಪ್ರಯಾಸದ ಕೆಲಸವಾಗಿತ್ತು.

**4. ಪರಿಹಾರಕ್ಕೆ ತಾವು ಕೈಗೊಂಡ ಕ್ರಮಗಳು**



**2002–03ರಲ್ಲಿ ಕೇವಲ ಶ್ರಮದಾನದ ಮೂಲಕ ಪೂರ್ಣಗೊಳಿಸಿದ ಬಾವಿ**

ಪ್ರಾರಂಭದಲ್ಲಿ ಕುಡಿಯುವ ನೀರಿಗಾಗಿ ಎಸ್.ಎಸ್.ಎ ಯೋಜನೆಯಡಿ 10,000 ಸಾವಿರ ರೂಪಾಯಿಗಳನ್ನು ನೀಡಲಾಗಿತ್ತು. ಈ ಹಣದಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸಾಧ್ಯವಿರಲಿಲ್ಲ. ಅದಕ್ಕಾಗಿ ಪೋಷಕರ ಸಭೆ ಕರೆದು ಸಮಸ್ಯೆಯ ಸಂಪೂರ್ಣ ಮಾಹಿತಿಯನ್ನು ನೀಡಿದಾಗ ಶ್ರಮದಾನದ ಮೂಲಕ ಬಾವಿ ನಿರ್ಮಾಣ ಮಾಡಲು ನಿರ್ಣಯ ಕೈಗೊಂಡೆವು. ಈ ಒಂದು ನಿರ್ಣಯಕ್ಕೆ ಬಹಳಷ್ಟು ಜನ ವಿರೋಧಿಸಿದರು. ಆಗ ಪ್ರತಿ ಮನೆ ಮನೆಗೆ ಹೋಗಿ ಶ್ರಮದಾನದ ಮಹತ್ವವನ್ನು ಮತ್ತು ಶೈಕ್ಷಣಿಕ ಮಹತ್ವವನ್ನು ತಿಳಿಸಿ ಆಸಕ್ತರ ಗುಂಪೊಂದನ್ನು ಸಿದ್ದಗೊಳಿಸಿದೆವು. ಈ ಗುಂಪು ಕೆಲಸ ಪ್ರಾರಂಭಿಸಿದ ಮೇಲೆ ಉಳಿದವರಿಗೆ ಪ್ರೇರಣೆ ದೊರೆತು ಸ್ವ ಇಚ್ಛೆಯಿಂದ ಪ್ರತೀ ದಿನ ಮನೆಗೆ ಒಬ್ಬರಂತೆ ಕೆಲಸಕ್ಕೆ ಬರಲು ಪ್ರಾರಂಭಿಸಿದರು. ಕೇವಲ 15 ದಿನಗಳಲ್ಲಿ ಆರು ಅಡಿ ಅಗಲದ, 60 ಅಡಿ ಆಳದ ಸುಂದರವಾದ ಬಾವಿಯನ್ನು ನಿರ್ಮಾಣ ಮಾಡಲಾಯಿತು. ಒಂದು ಲಕ್ಷ ರೂಪಾಯಿಗಳಲ್ಲಿ ನಿರ್ಮಾಣಗೊಳ್ಳಬೇಕಾದ ಬಾವಿಯನ್ನು ಕೇವಲ 10 ಸಾವಿರ ರೂಪಾಯಿಗಳಲ್ಲಿ ಶ್ರಮದಾನದ ಮೂಲಕ ನಿರ್ಮಿಸಲಾಯಿತು. ಈ ಕಾರ್ಯವನ್ನು ಶಾಲಾ ರಜಾ ಅವಧಿಯಲ್ಲಿ ಅಂದರೆ ಏಪ್ರಿಲ್ 15 ರಿಂದ ಏಪ್ರಿಲ್ 30ರ ವರೆಗೆ ನಿರ್ಮಾಣ ಮಾಡಲಾಯಿತು.




ಶಾಲಾ ಆಟದ ಮೈದಾನದ ನಿರ್ಮಾಣ ಮಾಡಬೇಕೆನ್ನುವ ಉದ್ದೇಶವಿತ್ತು. ಇದಕ್ಕೆ ಸರ್ಕಾರದ ಅನುದಾನ ಇರಲಿಲ್ಲ. ಮತ್ತು ಶಾಲೆಯ ಸುತ್ತಮುತ್ತಲೂ ತಗ್ಗು ದಿಣ್ಣೆಗಳಿಂದ ಮತ್ತು ಮರಗಳಿಂದ ಆವರಿಸಿರುವುದರಿಂದ ಮಕ್ಕಳು ಆಟ ಆಡಲಿಕ್ಕಿರಲಿ, ಶಾಲೆಗೆ ಪ್ರವೇಶಿಸುವುದಕ್ಕೂ ಸಮಸ್ಯೆಯಾಗಿತ್ತು. ಇದನ್ನು ಸುಲಭದ ರೀತಿಯಲ್ಲಿ ಪರಿಹರಿಸಿದೆವು. ಊರಿನ ಕೆಲವೇ ಪ್ರಮುಖರಲ್ಲಿ ಕೃಷಿ ಬಳಕೆಗಾಗಿ ಇರುವ ಟ್ರ್ಯಾಕ್ಟರ್, ಟಿಲ್ಲರ್, ಮತ್ತು ನಾಗರೀಕರ ಶ್ರಮದಾನದೊಂದಿಗೆ ಒಟ್ಟು 2 ಎಕರೆ ಜಾಗವನ್ನು ಸಮತಟ್ಟು ಮಾಡಲಾಯಿತು.

ಶಾಲಾ ನೂತನ ಕಟ್ಟಡ ನಿರ್ಮಾಣಕ್ಕೆ **ಎಸ್.ಎಸ್.ಎ** ಯೋಜನೆಯಡಿ ರೂ 3.50 ಲಕ್ಷ ಹಣ ಮಂಜೂರಾಗಿತ್ತು. ಇದರಲ್ಲಿ ಒಂದು ವಿಶಾಲವಾದ ಮತ್ತು ಭದ್ರವಾದ ಕಟ್ಟಡ ನಿರ್ಮಾಣಮಾಡಲು ಆರ್ಥಿಕ ಸಮಸ್ಯೆ ತಲೆದೋರಿತ್ತು. ಶ್ರಮದಾನದ ಮೂಲಕ ಅಡಿಪಾಯದ ಗುಂಡಿಗಳನ್ನು ಊರ ನಾಗರೀಕರೇ ನಿರ್ಮಾಣ ಮಾಡಿದರು. ಯಾವುದೇ ಗುತ್ತಿಗೆದಾರರಿಗೆ ಗುತ್ತಿಗೆ ನೀಡದೆ ಎಸ್.ಡಿ.ಎಂ.ಸಿ. ಸದಸ್ಯರೆಲ್ಲರೂ ಸೇರಿ ತಮ್ಮ ಮನೆಗೆ ತೆಗೆದುಕೊಳ್ಳಬೇಕಾದ ಜವಾಬ್ದಾರಿಯಂತೆ ಶಾಲೆಗೂ ಕಾಳಜಿ ತೆಗೆದುಕೊಂಡು ಕೆಲಸ ಪೂರೈಸಿದರು. ಇದರಲ್ಲಿಯೇ ಮಕ್ಕಳ ಶೈಕ್ಷಣಿಕ ಅಭಿವೃದ್ದಿಗೆ ಬೇಕಾಗುವ ಸಂತಸದ ಕಲಿಕೆಯನ್ನುಂಟು ಮಾಡುವ ಬಾಲಯೋಜನೆ ಕಾರ್ಯಕ್ರಮವನ್ನ ಯಶಸ್ವಿಯಾಗಿ ನಿರ್ಮಿಸಿದೆವು. ಅವು ಯಾವುವೆಂದರೆ ಏಣಿ. ಸೀಸಾ, ರ್‍ಯಾಂಪ್ಸನಲ್ಲಿ ಗಣಿತದ ವಿಷಯದ ಚಟುವಟಿಕೆಗಳನ್ನೊಳಗೊಂಡ ರೋಮನ್ ಸಂಖ್ಯೆಗಳು,ಗಣಿತದ ಚಿಹ್ನೆಗಳು, ಕಿಟಕಿಯಲ್ಲಿ ಆಂಗ್ಲ ಭಾಷೆಯ ಅಕ್ಷರಗಳು ಮತ್ತು ಪದಗಳು ನೆಲದ ಹಾಸಿನಲ್ಲಿ(ಟೈಲ್ಸ್) ಚದುರಂಗ ಆಟದ ಅಂಕಣ, ಕೋನ ಮಾಪಕದ ಅಳತೆ ಪಟ್ಟಿ, ಸಮತಲಾಕೃತಿಗಳು ಹಾಗೂ ತ್ರಿಕೋನ ಮಿತಿಗಳನ್ನು ನಿರ್ಮಿಸುವುದರ ಮೂಲಕ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಲು ಶ್ರಮವಹಿಸಿ ದುಡಿದಿರುತ್ತೇವೆ.

ಸುಂದರವಾದ ಶಾಲಾ ಕೈತೋಟ ನಿರ್ಮಾಣಕ್ಕೆ ಶ್ರಮದಾನದ ಮೂಲಕ ಬಾವಿ ತೆಗೆದದ್ದು ಮೈಧಾನ ಸಮತಟ್ಟು ಮಾಡಿದ್ದು ವರದಾನವಾಯಿತು. ಶ್ರಮದಾನದ ಮೂಲಕ ಕೈತೋಟ ನಿರ್ಮಾಣಕ್ಕೆ ಚಾಲನೆ ನೀಡಲಾಯಿತು. ಇದಕ್ಕಾಗಿ ಅಲಂಕಾರಿಕ ಸಸ್ಯಗಳು ಹಣ್ಣಿನ ಗಿಡಗಳು, ಔಷಧಿ ಸಸ್ಯಗಳು ಹಾಗೂ ತೆಂಗಿನ ಗಿಡಗಳನ್ನು ಸಂಗ್ರಹಿಸುವುದು ಸಮಸ್ಯೆಯಿತ್ತು. ಆಗ ಎಲ್ಲಾ ಗ್ರಾಮಸ್ಥರ ಸಭೆಯನ್ನು ಕರೆದು ಆರ್ಥಿಕ ಪರಿಸ್ಥಿತಿಯ ಅರಿವನ್ನು ಮಾಡಿಕೊಟ್ಟು ಇಚ್ಛೆವುಳ್ಳ ಊರ ನಾಗರೀಕರ ಮನವಲಿಸಿ ತಮ್ಮ ಅಥವಾ ತಮ್ಮ ತಂದೆಯ ಹೆಸರಿನ ಮೇಲೆ ಒಂದೊಂದು ಸಸ್ಯವನ್ನು ತಂದು ಕೊಡುವಂತೆ ಮನವೊಲಿಸುವುದರ ಜೊತೆಗೆ





ಆ ಸಸ್ಯವನ್ನು ತಾವೇ ನೆಟ್ಟು ಪ್ರಾರಂಭದಲ್ಲಿ ನೀರು ಹಾಕುವ ಕೆಲಸವನ್ನು ಮಾಡಿಸುವುದರ ಮೂಲಕವಾಗಿ ಒಂದು ಸುಂದರ ಉದ್ಯಾನವನವನ್ನು ನಿರ್ಮಿಸಿದೆವು. ಈಗ ನಮ್ಮ ಈ ಉದ್ಯಾನವನದಲ್ಲಿ ಫಲಕೊಡುವ 15 ತೆಂಗಿನ ಮರಗಳು, ಐದಾರು ಅಡಿಕೆ ಮರಗಳು 50 ಜಾತಿಯ ಔಷಧಿ ಸಸ್ಯಗಳು, ಹತ್ತಾರು ಜಾತಿಯ ಹಣ್ಣಿನ ಸಸ್ಯಗಳು. ಹಲವಾರು ಜಾತಿಯ ಅಲಂಕೃತ ಸಸ್ಯಗಳು, ಸುಂದರವಾದ (ಲಾನ್) ಹುಲ್ಲು ಹಾಸು ನಿರ್ಮಿಸುವುದರ ಮೂಲಕ ಕಂಗೊಳಿಸುವಂತೆ ಮಾಡಿದೆವು. ಈ ಸುಂದರವಾದ ಉದ್ಯಾನವನವನ್ನು ನೋಡಿ **ಪರಿಸರ ಅಧ್ಯಯನ ಕೇಂದ್ರ ಸಂತೆ ಕಡೂರು,** ಇವರು **'ಹಸಿರು ಶಾಲೆ ಪ್ರಶಸ್ತಿ'**ಯನ್ನು ನೀಡಿ ಗೌರವಿಸಿರುತ್ತಾರೆ.

**ಹಸಿರು ಶಾಲೆ ಪ್ರಶಸ್ತಿ**

## 5. ದಾನಿಗಳು:- ( ಶ್ರಮ, ಧನ, ಸಮಯ, ಹಾಗೂ ಜ್ಞಾನ ನೀಡಿದವರು)

ಒಂದು ಉತ್ತಮವಾದ ಶಾಲೆಯನ್ನು ನಿರ್ಮಾಣ ಮಾಡಬೇಕೆಂಬ ಉದ್ದೇಶದಿಂದ ಶಾಲೆಯಲ್ಲಿರುವ ಕೊರತೆಗಳನ್ನು ಪಟ್ಟಿಮಾಡಿ ಅವುಗಳನ್ನು ಪೂರೈಸುವುದಕ್ಕಾಗಿ ಊರ ನಾಗರೀಕರ ಮತ್ತು ದಾನಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅನೇಕ ರೀತಿಯ ಸಹಾಯವನ್ನು ಪಡೆಯಲಾಯಿತು. ಅದರಲ್ಲಿ ಧನ ಸಹಾಯ, ಶ್ರಮದಾನ, ವಸ್ತುರೂಪದ ಕೊಡುಗೆಗಳು, ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ಲೇಖನ ಸಾಮಾಗ್ರಿಗಳು, ಕ್ರೀಡಾ ಸಾಮಾಗ್ರಿಗಳನ್ನು ಪಡೆದುಕೊಳ್ಳಲಾಯಿತು. ಅವುಗಳ ವಿವರ ಈ ಕೆಳಕಂಡಂತಿದೆ.

| ಕ್ರಸಂ | ದಾನಿಗಳ ಹೆಸರು | ವಸ್ತು/ ಧನ ಸಹಾಯ | ಅಂದಾಜು ಮೊತ್ತ |
|---|---|---|---|
| 1 | ಹೆನಗೆರೆ ಗ್ರಾಮದ ಗ್ರಾಮಸ್ತರು | ತೆರೆದ ಬಾವಿ | 1.00.000 |
| 2 | ಎಸ್.ಡಿ.ಎಂ.ಸಿ & ಪೋಷಕರು | ಧ್ವಜಸ್ಥಂಭ/ಶೋಕೇಸ್/ಟೈಲ್ಸ್/ಡಯಾಸ್ | 50.000 |
| 3 | ಗಣೇಶ್ ಕಾಕಾಲ್ ಹೆಗ್ಗೋಡು | ಕಂಪ್ಯೂಟರ್ | 40.000 |
| 4 | ಹೆಚ್ ಮಂಜಪ್ಪ ಆಋಕ ನಿವೃತ್ತ ಲೋಕಾಯುಕ್ತ ಇಲಾಖೆ ಬೆಂಗಳೂರು. | ಜೋಕಾಲಿ, ಗ್ರಂಥಾಲಯ ಟೇಬಲ್, ಸ್ಕೂಲ್ ಬ್ಯಾಗ್ ಮತ್ತು ಕುಕ್ಕರ್. | 17.000 |
| 5 | ರೋಟರಿ ಕ್ಲಬ್ ಸಾಗರ | ಪೀಠೋಪಕರಣಗಳು | 7.500 |
| 6 | ಶ್ರೀ ಉದಯ್ ಕುಮಾರ್ ಕೃಷಿಕರು ದೊಂಬೆ. ಸಾಗರ ತಾ | ಸುವರ್ಣ ಮಹೋತ್ಸವದ ಊಟದ ವ್ಯವಸ್ಥೆ | 25.000 |
| 7 | ಕೆ.ಎಸ್.ಸುಬ್ಬರಾವ್ ಕೇಡಲಸರ | ಪಂಪ್‌ಸೆಟ್ | 7.500 |
| 8 | ಗುರುಸ್ಮೃತಿ ಟ್ರಸ್ಟ್ ಉಡುಪಿ | ಅಕ್ವಾಗಾರ್ಡ್ | 9.500 |

| | | | |
|---|---|---|---|
| 9 | ನಾಗರಾಜ್ ಮುರ್ಡೇಶ್ವರ್ ನಿವೃತ್ತ ಂಅಈ. ಸಾಗರ | ಕ್ಷೇಮಾಭಿವೃದ್ಧಿ ನಿಧಿಗೆ ಮತ್ತು ಸುವರ್ಣ ಮಹೋತ್ಸವಕ್ಕೆ ಧನ ಸಹಾಯ | 6.500 |
| 10 | ಗಣಪತಿ ಕೆ. ( ದಿವಂಗತ ಜಂಬೂರು ಕೆರಿಯಮ್ಮ ಕೆರಿಯಪ್ಪ ಇವರ ಸ್ಮರಣಾರ್ಥ | ಕ್ಷೇಮಾಭಿವೃದ್ಧಿ ನಿಧಿ ಮತ್ತು ಸುವರ್ಣ ಮಹೋತ್ಸವಕ್ಕೆ ಧನ ಸಹಾಯ | 7.500 |
| 11 | ಸುನಿಧಿ.ಸುರೇಶ್‌ಚಂದ್ರ ಪ್ರಾಂಶುಪಾಲರು (DTC) LIC ಶಿವಮೊಗ್ಗ | ಶಾಲೆಗೆ ಗೇಟ್ ನಿರ್ಮಾಣಕ್ಕೆ ಸಹಾಯ | 6.000 |
| 12 | ಶ್ರೀ ರಂಗನಾಥ ಶರ್ಮ ಗೋಳ್‌ಗೋಡು | ಕುಡಿಯುವ ನೀರಿನ ಟ್ಯಾಂಕ್ | 5.000 |
| 13 | ಕಿರಣ ಹೆಚ್.ಬಿ. ಪ್ರೊ; ವಿ.ಎಸ್.ಕೆ ಟೂರ್ಸ್ & ಟ್ರಾವಲ್ಸ್ ಬೆಂಗಳೂರು. | ಆಗಿಆ ಪ್ಲೇಯರ್ ಮತ್ತು ಬಹುಮಾನಗಳು | 13.000 |
| 14 | ಗಣೇಶ್ ಹೆಚ್.ಟಿ. ಎಸ್.ಜಿ ಬ್ಯಾಟರೀಸ್ ಸಾಗರ. | ಯು.ಪಿ.ಎಸ್. (ಕಂಪ್ಯೂಟರ್) & ಸುವರ್ಣ ಮಹೋತ್ಸವಕ್ಕೆ ಸಹಾಯ | 5.500 |
| 15 | ಆದಿತ್ಯ ಬಿನ್ ಚಂದ್ರಶೇಖರಯ್ಯ ಹೆನಗೆರೆ | ಕಂಪ್ಯೂಟರ್ ಟೇಬಲ್ | 4.000 |
| 16 | ಕುಮಾರ್ ಶೆಟ್ರು ಮಾಜಿ ಗ್ರಾ. ಪಂ ಸದಸ್ಯರು ಉಳ್ಳೂರು. | ಪ್ಯೂರ್‌ಇಟ್ ನೀರಿನ ಫಿಲ್ಟರ್ | 2.000 |
| 17 | ನಾರಾಯಣಪ್ಪ ಚಿಪ್ಪಳಿ ಪಿಡಬ್ಲುಡಿ ಗುತ್ತಿಗೆದಾರರು | ಸಮವಸ್ತ್ರ | 2.000 |
| 18 | ಊರಿನ ಗ್ರಾಮಸ್ಥರು ಹೆನಗೆರೆ | ಮಕ್ಕಳ ಕ್ಷೇಮಾಭಿವೃದ್ಧಿ ನಿಧಿಗೆ ಧನ ಸಹಾಯ | 10.000 |
| 19 | ನಾಗರಾಜ್ ಹೆಚ್.ಎಂ. ಶಿಕ್ಷಕರು ಹೆನಗೆರೆ | ಪ್ರತಿಭಾ ಪುರಸ್ಕಾರಕ್ಕೆ ಸಹಾಯ | 5.000 |
| 20 | ಜಯಣ್ಣನವರು ಕೃಷಿಕರು ಸಾಗರ | ಕುಕ್ಕರ್ | 2.000 |
| 21 | ನವಚೇತನ ಸ್ವ ಸಹಾಯ ಸಂಘ ಹೆನಗೆರೆ | ಕುರ್ಚಿಗಳು | 2.000 |
| 21 | ಕೆ.ಎಸ್. ಸದಾಶಿವಯ್ಯ ಕೇಡಲಸರ | ಊಟದ ತಟ್ಟೆ ಮತ್ತು ಲೋಟಗಳು | 1.500 |
| 22 | ಗಣಪತಿ ಹೆಚ್.ಬಿ ಅಧ್ಯಕ್ಷರು ಎಸ್.ಡಿ.ಎಂ.ಸಿ ಹೆನಗೆರೆ | ಪ್ಲೇಟ್‌ಸ್ಟಾಂಡ್, ನೀರಿನ ಸ್ಟೀಲ್ ಫಿಲ್ಟರ್. ಸ್ಟೀಲ್ ಡ್ರಮ್. | 2.500 |
| 23 | ಹೇಮಂತ ಹೆಚ್.ವಿ ಬಿನ್ ಬಿ. ವೆಂಕಟರಾಮು ಹೆನಗೆರೆ | ರಾಷ್ಟ್ರ ನಾಯಕರ ಪೋಟೋ & ಪೈಪ್ ಲೈನ್ ವ್ಯವಸ್ಥೆ | 2.500 |
| 24 | ದೇವೇಂದ್ರಪ್ಪ ಹೆಚ್.ಇ. ಹೆನಗೆರೆ | ವಾರ್ಷಿಕೋತ್ಸವಕ್ಕೆ ಸಹಾಯ | 1.500 |
| 25 | ತಿಲಕ ಟಿ.ಎಸ್. ಹೆನಗೆರೆ | ಕೇರಂ ಬೋರ್ಡ್ | 1.000 |
| 26 | ಸುಭಾಷ್‌ಚಂದ್ರ ಬಿನ್ ರಾಮಪ್ಪ ಹೆನಗೆರೆ | ಕೇರಂ ಬೋಡ್ | 1.000 |
| 27 | ಹವ್ಯಕ ಯುವಜನ ಸಂಘ ಮಂಚಾಲೆ. | ನೋಟ್ ಪುಸ್ತಕ | 1.500 |
| 28 | ಕೃಷ್ಣಮೂರ್ತಿ ಇಂಜಿನಿಯರ್ ಜಿ.ಪಂ ಸೊರಬ. | ವಾರ್ಷಿಕೋತ್ಸವಕ್ಕೆ ಮತ್ತು ಸುವರ್ಣ ಮಹೋತ್ಸವಕ್ಕೆ ಸಹಾಯ | 5.000 |
| 29 | ಶ್ರೀಧರ ಬಿನ್ ದೊಡ್ಡಕನ್ನಪ್ಪ ಹೆನಗೆರೆ | ಫ್ಯಾನ್ | 1.500 |
| 30 | ಮಾಮ್ಕೋಸ್ ಶಿವಮೊಗ್ಗ | ಧನ ಸಹಾಯ | 2.000 |
| 31 | ತಿಮ್ಮಪ್ಪ ಹೆಚ್ ಹೆನಗೆರೆ | ಟ್ರ್ಯಾಕ್ಟರ್ ಸೇವೆ | 5.000 |
| 32 | ರಾಜು ಹೆಚ್. ಶಿಕ್ಷಕರು ಎಸ್.ಆರ್ ಪುರ | ಬೆಲ್ಟ್ ಮತ್ತು ಟೈ ದಾನಿಗಳು | 5.000 |

ಈ ರೀತಿಯಲ್ಲದೇ ಶಾಲೆಯ ಅಭಿವೃದ್ಧಿ ಹಾಗೂ ಪ್ರಗತಿಗಾಗಿ ಕೆಲವು ಗಣ್ಯ ವ್ಯಕ್ತಿಗಳು ಸಮಯ ಮತ್ತು ಜ್ಞಾನವನ್ನು ನೀಡಿರುತ್ತಾರೆ. ಅವರ ಸೂಚನೆಗಳನ್ನು ಸ್ವೀಕರಿಸುವುದರ ಮೂಲಕ ಶಾಲೆಯಲ್ಲಿ ನಾವಿನ್ಯಯುತ ಚಟುವಟಿಕೆಗಳನ್ನು ಹಮ್ಮಿಕೊಂಡಿರುತ್ತೇವೆ. ಜ್ಞಾನ ದಾಸೋಹ ಮಾಡಿದ ಮಹನೀಯರ ಪಟ್ಟಿ ಈ ರೀತಿ ಇದೆ.

| ಕ್ರಸಂ | ದಾನಿಗಳ ಹೆಸರು | ಊರು | ಉದ್ಯೋಗ |
|---|---|---|---|
| 1 | ಊರಿನ ಎಲ್ಲಾ ಗ್ರಾಮಸ್ಥರು | ಹೆನಗೆರೆ | ಕೃಷಿ ಕಾರ್ಮಿಕರು |
| 2 | ಚೌಡಪ್ಪ ಹೆಚ್.ಕೆ. | ಹೆನಗೆರೆ | ಮಾಜಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹೆನಗೆರೆ |
| 3 | ಶಿವಪ್ಪ ಬಿ.ಕೆ.ಹೆನಗೆರೆ | ಹೆನಗೆರೆ | ಮಾಜಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹೆನಗೆರೆ |
| 4 | ಗಣಪತಿ ಹೆಚ್. | ಹೆನಗೆರೆ | ಮಾಜಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹೆನಗೆರೆ |
| 5 | ರವೀಂದ್ರ ಕುಮಾರ್ ಎಮ್. | ಹೆನಗೆರೆ | ಮಾಜಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹೆನಗೆರೆ |
| 6 | ಗಣಪತಿ ಹೆಚ್. | ಹೆನಗೆರೆ | ಮಾಜಿ ಎಸ್.ಡಿ.ಎಂ.ಸಿ. ಅಧ್ಯಕ್ಷರು ಹೆನಗೆರೆ |
| 7 | ಓಂಕೇಶ್ ಹೆಚ್.ಇ. | ಹೆನಗೆರೆ | ಮಾಜಿ ಎಸ್.ಡಿ.ಎಂ.ಸಿ. ಸದಸ್ಯರು ಹೆನಗೆರೆ |
| 8 | ಶಾರಧಾ ವಿ ಭಟ್ | ಹೆನಗೆರೆ | ಸಹ ಶಿಕ್ಷಕಿ ಸಕಿಪ್ರಾ ಶಾಲೆ ಹೆನಗೆರೆ |
| 9 | ಭರಮಗೌಡರ್ ಎಂ | ಸಾಗರ | ಸಹ ಶಿಕ್ಷಕರು ಸಪ್ರೌ ಶಾಲೆ ತಡಗಳಲೆ |

6. **ವಿಶೇಷ ಸಾಧನೆಗಳು:-** ಶಾಲೆಯ ಬೌತಿಕ ಪ್ರಗತಿಯ ಜೊತೆಗೆ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆವು. ಅದರ ಫಲವಾಗಿ ನಮ್ಮ ಶಾಲೆಯ ಮಕ್ಕಳು ಕೆ.ಎಸ್.ಕ್ಯೂ.ಎ.ಓ ಪರೀಕ್ಷೆಯಲ್ಲಿ ಸತತವಾಗಿ ಮೂರು ಬಾರಿ ಅಂದರೆ 2006-07,2007-08, 2008-09 ನೇ ಸಾಲಿನಲ್ಲಿ ಕ್ಲಸ್ಟರ್ ಮಟ್ಟದಲ್ಲಿ 'ಗುಣಮಂಥನ ಪ್ರಶಸ್ತಿ'ಯನ್ನು ಪಡೆದುಕೊಂಡಿರುತ್ತಾರೆ. ಈ ಪ್ರಶಸ್ತಿ ಯಶಸ್ವಿಯಾಗಲು ಶಾಲಾ ರಜೆಯ ಅವಧಿಯಲ್ಲಿಯೂ ಕೂಡ ವಿಶೇಷ ತರಗತಿಗಳನ್ನು ತೆಗೆದುಕೊಂಡು ಮಕ್ಕಳಿಗೆ ತರಬೇತಿ ನೀಡಲಾಯಿತು.

ಕಲಿಕೋಪಕರಣ ಪ್ರದರ್ಶನದಲ್ಲಿ ನಮ್ಮ ಶಾಲೆಯು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿಯಾಗಿದೆ.ಹಾಗೆಯೇ ನಮ್ಮ ಶಾಲೆಯ ಮಕ್ಕಳು ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಪರ್ಧಿಸಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿ ನಮ್ಮ ಶಾಲೆಗೆ ಕೀರ್ತಿ ತಂದಿರುತ್ತಾರೆ.

ಶಾಲಾ ಅವಧಿಯಲ್ಲಿ ಮಕ್ಕಳಿಗೆ ಏನಾದರೂ ಅವಘಡಗಳು ಸಂಭವಿಸಿದರೆ ಅದರ ಚಿಕಿತ್ಸಾವೆಚ್ಚವನ್ನು ಭರಿಸಲು 'ಶಾಲಾ ಮಕ್ಕಳ ಕ್ಷೇಮಾಭಿವೃದ್ದಿ ನಿಧಿ'ಯನ್ನು ದಾನಿಗಳ ಸಹಾಯದಿಂದ ಸ್ಥಾಪಿಸಿದ್ದೇವೆ. ಇದರಲ್ಲಿ ಈಗ ಒಟ್ಟು 15 ಸಾವಿರ ರೂಪಾಯಿಗಳು ಇವೆ.

ಮಕ್ಕಳಲ್ಲಿ ನೈತಿಕಪ್ರಜ್ಞೆ, ಶಿಸ್ತು, ಪ್ರಾಮಾಣಿಕ ಮನೋಭಾವನೆಯನ್ನು ಬೆಳೆಸುವುದಕ್ಕಾಗಿ 'ಪ್ರಾಮಾಣಿಕ ಮಳಿಗೆ' ಎನ್ನುವ ವಿನೂತನ ಕಾರ್ಯಕ್ರಮವನ್ನು ಜಾರಿಗೆ ತಂದಿರುತ್ತೇವೆ. ಲೇಖನ ಸಾಮಾಗ್ರಿಗಳನ್ನು ತಂದಿಟ್ಟು ಅವುಗಳ ಬೆಲೆಯನ್ನು ಬರೆದು ಮುಕ್ತವಾಗಿ ಇಡಲಾಗಿದೆ. ಮಕ್ಕಳು ಆ ವಸ್ತುವಿನ ಬೆಲೆಗಳನ್ನು ನೋಡಿ ಸ್ವತಃ ಅವರೆ ಹಣವನ್ನು ಪ್ರಾಮಾಣಿಕ ಡಬ್ಬಿಗೆ ಹಾಕಿ ವಸ್ತುಗಳನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ. ಇದರ ಜೊತೆಗೆ ಮಕ್ಕಳಲ್ಲಿ ಉಳಿತಾಯ ಪ್ರಜ್ಞೆಯನ್ನು ಮೂಡಿಸುವುದಕ್ಕಾಗಿ ಶಾಲೆಯಲ್ಲಿ ಉಳಿತಾಯ ಖಾತೆಯನ್ನು ತರೆದು ಮಕ್ಕಳು ಉಳಿಸಿರುವ 5, 10 ರೂಪಾಯಿಗಳನ್ನು ಸಂಗ್ರಹಿಸಿ ತಿಂಗಳಿಗೊಮ್ಮೆ ಬ್ಯಾಂಕಿನಲ್ಲಿ ಅವರ ಖಾತೆಗಳಿಗೆ ಜಮಾ ಮಾಡಲಾಗುವುದು.







ಪೋಷಕರು, ಮಕ್ಕಳು ಮತ್ತು ಊರ ನಾಗರೀಕರೊಂದಿಗೆ ಶೃಕ್ಷಣಿಕ ಪ್ರವಾಸ

ಪೋಷಕರು ಮತ್ತು ಊರ ನಾಗರೀಕರನ್ನು ಶಾಲೆಯ ಕಡೆಗೆ ಆಕರ್ಷಿಸುವಂತೆ ಮಾಡಲು ಪೋಷಕರು ಹಾಗೂ ಶಾಲಾ ಮಕ್ಕಳೊಂದಿಗೆ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳುವ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಇದುವರೆಗೆ ಸರಿಸುಮಾರು ಇಂತಹ ಹತ್ತಾರು ಪ್ರವಾಸಗಳನ್ನು ಕೈಗೊಂಡಿರುತ್ತೇವೆ. ಇದರ ಫಲವಾಗಿ **'ಶಾಲೆ ನಮ್ಮದು, ಮಕ್ಕಳ ಶೈಕ್ಷಣಿಕ ಅಭಿವೃದ್ದಿಯೂ ಕೂಡ ನಮ್ಮದು'** ಎನ್ನುವ ಬಲವಾದ ನಂಬಿಕೆಯನ್ನು ಮೂಡಿಸಲಾಗಿದೆ. ಹಾಗಾಗಿ ಮಕ್ಕಳು ಸತತವಾಗಿ ಶಾಲೆಗೆ ಹಾಜರಾಗುತ್ತಾರೆ.ವಿಶೇಷ ಸಂದರ್ಭದಲ್ಲಿ ಪೋಷಕರು ತಪ್ಪದೇ ಶಾಲೆಗೆ ಬರುತ್ತಾರೆ. ಈ ಕಾರಣಕ್ಕಾಗಿ ಪ್ರತೀ ವರ್ಷಕ್ಕೊಮ್ಮೆ ನಾಲ್ಕೈದು ಬಾರಿ ಶ್ರಮದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾ ಬಂದಿದ್ದೇವೆ.ಗಾಂಧೀಜಿಯವರ ಕನಸಾದ **'ಶ್ರಮದಾನ ಹಾಗೂ ಸ್ವಚ್ಛ ಭಾರತ'** ಧ್ಯೇಯವನ್ನು ಯಶಸ್ವಿಗೊಳಿಸಿದ್ದೇವೆ.

ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸುವ ದೃಷ್ಟಿಯಿಂದ ಶಾಲೆಯಲ್ಲಿ ಸುಸಜ್ಜಿತವಾದ **'ವಾಚನಾಲಯ'**ವನ್ನು ಪ್ರಾರಂಬಿಸಲಾಯಿತು. ಮಕ್ಕಳು ಕುಳಿತುಕೊಂಡು ಓದಲು ಉದ್ದವಾದ ಟೇಬಲ್ ಮತ್ತು ಕುರ್ಚಿಗಳನ್ನು ವ್ಯವಸ್ಥೆ ಮಾಡಲಾಗಿದೆ. ವಾಚನಾಲಯದಲ್ಲಿ ದಿನ ಪತ್ರಿಕೆಗಳು ವಾರ ಪತ್ತಿಕೆಗಳು ಚಂದಮಾಮ, ಪಂಚತಂತ್ರದ ಕಥೆಗಳು, ಬಾಲ ರಾಮಾಯಣ ಹೀಗೆ ಮಕ್ಕಳಿಗೆ ಉಪಯೋಗವಾಗುವ ಅನೇಕ ಪುಸ್ತಕಗಳು ಲಭ್ಯವಿರುತ್ತವೆ. ಶಾಲೆ ಆಕರ್ಷಣೀಯವಾಗಿ ಕಾಣಲು ಸುಂದರವಾದ ಮುಖ ಮಂಟಪವನ್ನು ಊರಿನ ನಾಗರೀಕರ ಸಹಾಯದಿಂದ ನಿರ್ಮಿಸಲಾಗಿದೆ. ಶಾಲಾ ಬಿಡುವಿನ ವೇಳೆಯಲ್ಲಿ ಮಕ್ಕಳು ಕುಳಿತುಕೊಂಡು ಓದಲಿಕ್ಕೆ ಮತ್ತು ವಿಶ್ರಾಂತಿ ಪಡೆಯಲಿಕ್ಕೆ ಹುಲ್ಲಿನ ಮೇಲ್ಹಾವಣೆ ಇರುವ ಕುಟೀರವನ್ನು ನಿರ್ಮಿಸಲಾಗಿದೆ.

**ಸುವರ್ಣ ಮಹೋತ್ಸವ** :- ಶಾಲೆ ಪ್ರಾರಂಭವಾಗಿ 2013ಕ್ಕೆ 50 ವರ್ಷಗಳನ್ನು ಪೂರೈಸಿರುತ್ತದೆ. ಇದರ ಸವಿನೆನಪಿಗಾಗಿ **'ಶಾಲಾ ಸುವರ್ಣ ಮಹೋತ್ಸವ'** ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಒಂದು ಕಾರ್ಯಕ್ರಮಕ್ಕಾಗಿ ಊರಿನಲ್ಲಿ ಎಲ್ಲಾ ಗ್ರಾಮಸ್ಥರಿಗೆ ಆಟೋಟ ಸ್ಪರ್ಧೆಗಳು, ರಂಗೋಲಿ ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಹಬ್ಬದ ಸಂಭ್ರಮದಲ್ಲಿ ತೇಲಿ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕಾಗಿ ಶಾಲೆಯಲ್ಲಿ ಓದಿದ ಪ್ರತಿಯೊಬ್ಬ ಹಳೆಯ ವಿದ್ಯಾರ್ಥಿಗಳು ವಿವಿಧ ಹುದ್ದೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲರನ್ನೂ ಒಗ್ಗೂಡಿಸಿ ಅವರಿಂದ ಶಾಲೆಗೆ ಅವಶ್ಯಕವಾದ ವಸ್ತು ರೂಪದ ಕೊಡುಗೆಗಳನ್ನು ಸಂಗ್ರಹಿಸಲಾಯಿತು. ಈ ರೀತಿ ದಾನ ಮಾಡಿದ ಎಲ್ಲಾ ಮಹನೀಯರಿಗೂ ನೆನಪಿನ ಕಾಣಿಕೆ ನೀಡುವುದರ ಮೂಲಕ ಅವರನ್ನು ಸನ್ಮಾನಿಸಲಾಯಿತು. ಈ ಸಮಾರಂಭಕ್ಕೆ ಕರ್ನಾಟಕ ರಾಜ್ಯ ಸರ್ಕಾರದ ಈಗಿನ ಕಂದಾಯ ಮಂತ್ರಿಗಳಾದ **ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು** ಆಗಮಿಸಿ ಶಾಲಾ ಶಿಕ್ಷಕರು ಹಾಗೂ ಊರಿನ ಜನರ ಸಹಕಾರ ಮತ್ತು ಶಾಲೆಯ ಬಗ್ಗೆ ಇರುವ

ಅವರ ಅಭಿಮಾನವನ್ನು ಕುರಿತು ಪ್ರಶಂಸೆಯ ಮಾತುಗಳನ್ನು ಆಡಿದರು. ಈ ಒಂದು ಕಾರ್ಯಕ್ರಮಕ್ಕೆ ಸುಮಾರು 2 ಲಕ್ಷ ರೂಪಾಯಿಗಳ ವೆಚ್ಚವನ್ನು ಮಾಡಲಾಗಿತ್ತು.



**ಮಾನ್ಯ ಜಿಲ್ಲಾಧಿಕಾರಿಗಳಿಂದ ಜಿಲ್ಲಾ ಆತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆಯುತ್ತಿರುವುದು.**

**ಉಪಸಂಹಾರ :–** ಈ ಶಾಲೆಯ ಬಗ್ಗೆ ಹಗಲಿರುಳು ಶ್ರಮಿಸಿ ಶಾಲಾ ಮಕ್ಕಳಲ್ಲಿ ಮತ್ತು ಊರಿನ ನಾಗರೀಕರಲ್ಲಿ ಶೈಕ್ಷಣಿಕ, ಸಾಮಾಜಿಕ, ಹಾಗೂ ಸಾಂಸ್ಕೃತಿಕ ಪ್ರಜ್ಞೆಯನ್ನು ಜಾಗೃತಗೊಳಿಸಿಸ ಶಾಲೆಯತ್ತ ಮುಖಮಾಡುವಂತೆ ಮಾಡಿದ ಶಿಕ್ಷಕರಿಗೆ ಶಿಕ್ಷಣ ಇಲಾಖೆ **'ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ'**ಯನ್ನು ನೀಡಿ ಗೌರವಿಸಿತು. ಮತ್ತು ಊರ ನಾಗರೀಕರಲ್ಲಾದ ಬದಲಾವಣೆಯನ್ನು ನೋಡಿ ಊರಿನವರೇ **'ನಾಗರೀಕ ಸನ್ಮಾನ'** ಮಾಡುವುದರ ಮೂಲಕ ಶಿಕ್ಷಕರಿಗೆ ಉತ್ತೇಜನ ನೀಡಿದರು.

ಈಗ ಶಾಲೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಪಡೆದುಕೊಂಡು ಯಾವುದೇ ಖಾಸಗಿ ಶಾಲೆಗೆ ಸರಿ ಸಾಟಿ ಇಲ್ಲದಂತೆ ಬೆಳೆದು ನಿಂತಿರುವುದು ಹೆಮ್ಮೆಯ ಸಂಗತಿಯಾಗಿದೆ. ಈ ಎಲ್ಲಾ ಚಟುವಟಿಕೆಗಳಿಗೆ ಇಲಾಖೆಯು ಸಲಹೆ ಸಹಕಾರ ನೀಡುವುದರ ಮೂಲಕ ಅನುದಾನಗಳನ್ನು ಬಿಡುಗಡೆಗೊಳಿಸಿ ನಮ್ಮ ಯಶಸ್ಸಿಗೆ ಕಾರಣೀಭೂತವಾದ ಶಿಕ್ಷಣ ಇಲಾಖೆಗೆ ಹೆಮ್ಮೆಯಿಂದ ಅಭಿನಂದನೆಯನ್ನು ಸಲ್ಲಿಸುತ್ತೇನೆ.